# ವಿಶೇಷ ಹಸಿರು ದಾಸವಾಳ



ಸಾಮಾನ್ಯವಾಗಿ ದಾಸವಾಳ ಗಿಡಗಳು ಬಹುತೇಕರ ಕೈತೋಟಗಳಲ್ಲಿರುತ್ತವೆ. ಬಿಳಿ, ಕೆಂಪು ಮತ್ತು ಹಳದಿ ಬಣ್ಣದ ಹೂಗಳನ್ನು ಎಲ್ಲರೂ ನೋಡಿರುತ್ತಾರೆ. ಕಸಿ ಮಾಡಿರುವ ಗಿಡಗಳಲ್ಲಿ ಎರಡು ಬಣ್ಣಗಳು ಮತ್ತು ಎರಡು ಸಾಲು ದಳಗಳಿರುವ ದೊಡ್ಡ ಹೂಗಳು ಬಿಡುತ್ತವೆ. ನಮ್ಮ ಕೈತೋಟದಲ್ಲಿ 52 ವಿವಿಧ ಬಣ್ಣಗಳ ಹೂ ಬಿಡುವ ದಾಸವಾಳ ತಳಿಗಳಿವೆ. ಅದರಲ್ಲಿ ಒಂದು ತಳಿ ತನ್ನ ಪಾಚಿ ಹಸಿರು ಬಣ್ಣದಿಂದ ವಿಶೇಷವಾಗಿದೆ.

ಹಸಿರೆಲೆಯಲ್ಲಿರುವ ಪತ್ರ ಹರಿತ್ತು (ಕ್ಲೊರೊಫಿಲ್) ಎಂಬ ವರ್ಣದ್ರವ್ಯದಿಂದ. ಹೂವುಗಳಲ್ಲಿ ಆಂತೋಸಯಾನಿನ್ಸ್, ಕೆರೋಟಿನ್ಯಾಡ್ಸ್, ಫ್ಲೆವೋನಾಲ್ಸ್ ಮುಂತಾದ ವರ್ಣದ್ರವ್ಯಗಳ ಮಿಶ್ರಣದಿಂದ ವಿವಿಧ ಬಣ್ಣಗಳು ಬರುತ್ತವೆ. ಆದರೆ ಈ ಹೂವಿನಲ್ಲಿ ಹಸಿರು ಬಣ್ಣದ ದಳಗಳು ಕಾಣಿಸುತ್ತಾ ಸೋಜಿಗ ಉಂಟು ಮಾಡಿವೆ. ಇದು ಕಸಿ ಮಾಡಿದ ಗಿಡವಾಗಿದ್ದು ಹಸಿರು ಬಣ್ಣದ ದಳಗಳ ನಡುವೆ ಸ್ವಲ್ಪ ಗುಲಾಬಿ ಬಣ್ಣವೂ ಇದೆ. ಈ ವಿಶೇಷ ದಾಸವಾಳದಲ್ಲಿ ಬೇರೆ ಬೇರೆ ರೀತಿಯ ವರ್ಣದ್ರವ್ಯಗಳ ಸಂಯೋಜನೆಯಿಂದ ಹಸಿರು ಬಣ್ಣ ಮೂಡಿದ್ದು ಪ್ರಕೃತಿಯ ಚಮತ್ಕಾರವನ್ನು ತೆರೆದಿಟ್ಟಿದೆ.

—ಎಸ್. ಶಿಶುಪಾಲ, ದಾವಣಗೆರೆ



# ಅಡಿಕೆ ಮರದಲ್ಲಿ ಗಣಪ!

ಅಡಿಕೆ ಮಲೆನಾಡಿನ ಪ್ರಮುಖ ವಾಣಿಜ್ಯ ಬೆಳೆ. ವೈಜ್ಞಾನಿಕ ಆವಿಷ್ಕಾರಗಳು ಹೆಚ್ಚಿದಷ್ಟೂ ಸವಾಲುಗಳೂ ಎದಿರಾಗುತ್ತಿವೆ. ಕೊಳೆ ರೋಗ, ಹಳದಿ ರೋಗ, ಪ್ರಕೃತಿ ವಿಕೋಪದಂತಹ ದಾಳಿಗಳಿಂದ ಅಡಿಕೆಯನ್ನು ಉಳಿಸಿಕೊಳ್ಳುವುದೇ ಕಷ್ಟವೆಂಬಂತಾಗಿದೆ. ಪರಿಸ್ಥಿತಿ ಹೀಗಿರುವಾಗ ಈ ಪ್ರಕೃತಿ, ಸತ್ಯಕ್ಕಾಗಿ ನಿರಂತರ ಸಂಶೋಧನೆ ನಡೆಸ ಹೊರಟವರೊಡನೆ, ತನ್ನ ವಿಸ್ಮಯಗಳನ್ನು ತೋರುತ್ತಾ ಮತ್ತಷ್ಟು ಬೆರಗುಗೊಳಿಸುವುದೆಂಬುದಕ್ಕೆ ಚಿತ್ರದಲ್ಲಿ ಕಂಡು ಬರುವ ಅಡಿಕೆ ಮರವೇ ನಿದರ್ಶನ.

ತಾಳೆ ಜಾತಿಗೆ ಸೇರಿದ ಅಡಿಕೆ ಮರ ಕವಲು ಹೊಂದುವುದಿಲ್ಲ. ಇಲ್ಲಿ ಕಾಣುವ ಅಡಿಕೆ ಮರದ ಬುಡದಲ್ಲೇ ಮಧ್ಯದಿಂದ ಟಿಸಿಲೊಡೆದು, ಕವಲೊಂದು ಹೊರ ಚಾಚಿದ್ದು, ಉಳಿದ ಕಾಂಡ, ಆ ಕವಲಿಗೆ ಅವಕಾಶವೊದಗಿಸಲು ಸ್ವಲ್ಪ ಹೊರ ಬಾಗಿ ಮತ್ತೆ ಹಿಂತಿರುಗಿ ಮೇಲ್ಭಾಗಕ್ಕೆ ಬೆಳೆಯುತ್ತಾ ಹೋಗಿದೆ. ಇದು ಗಣಪನ ಮುಖದಂತೆ ಕಂಡುಬರುವುದರಿಂದ ಹಾಗೇ ಅಲಂಕರಿಸಿದ್ದು, ಅಡಿಕೆ ಮರ ಗಣಪನೆಂದೇ ಖ್ಯಾತಗೊಂಡಿದೆ

—ಎಸ್.ಎನ್. ಚಂದ್ರಕಲಾ ಕೊಪ್ಪ, ಹಲ್ಲುಮಕ್ಕಿ

# ಅಪರೂಪದ ಗದೆ

ಕೆಂಗಲ್ ಆಂಜನೇಯ ಸ್ವಾಮಿ ದೇವಸ್ಥಾನವು ಬೆಂಗಳೂರು– ಚನ್ನಪಟ್ಟಣ ಹೆದ್ದಾರಿಯ ಬದಿಯಲ್ಲೇ ಸಿಗುವ ಸುಂದರ ಆಲಯ. ಈ ದೇವಸ್ಥಾನದ ಹಿಂದೆ ಇರುವ ಪುಟ್ಟ ಗುಡ್ಡದ ಮೇಲೆ ಬಹಳ ಹಿಂದೆಯೇ ನಿರ್ಮಿಸಿದ್ದ ನೀರಿನ ಟ್ಯಾಂಕ್‌ಗೆ ಆಂಜನೇಯ ಸ್ವಾಮಿಯ ಆಯುಧವಾದ ಗದೆಯ ವಿಶೇಷವಾದ ಹಾಗೂ ಅಪರೂಪದ ಗಮನ ಸೆಳೆಯುವ ರೂಪ ನೀಡಿ ಆಕರ್ಷಣೆ ಆಗುವಂತೆ ಮಾಡಿದ್ದರು.

ಈಗ ಇದರಲ್ಲಿ ನೀರು ಹಿಡಿದಿಡುವ ಸಾಮರ್ಥ್ಯ ಇಲ್ಲದಿದ್ದರೂ, ಇದನ್ನು ಸಂರಕ್ಷಿಸಿ, ಚೆಂದದ ಬಣ್ಣ ನೀಡಿ, ಕ್ಷೇತ್ರದ ಸೊಬಗು ಹೆಚ್ಚಿಸಿದ ಅಧಿಕಾರಿಗಳಿಗೆ ಧನ್ಯವಾದಗಳು. ವಿಶಾಲವಾದ ಇಲ್ಲಿಯ ಉದ್ಯಾನ ಹಾಗೂ ಪಾರ್ಕಿಂಗ್ ಜಾಗವು ಭಕ್ತರನ್ನು ಹಾಗೂ ಪ್ರವಾಸಿಗರನ್ನು ಸೆಳೆಯುತ್ತಿದೆ.

—ರಮೇಶ್ ಬಿ.ಎಂ., ಬೆಂಗಳೂರು

